ನೆಲೆಯಾಯಿತೆಂದು ಅಪ್ಪ ಅಮ್ಮ ಸಂತೋಷದಲ್ಲಿರುವಾಗ ಅನಿರೀಕ್ಷಿತ ಪೆಟ್ಟು. ಸರೋಜ ತಂದು ಎದುರಿಗಿಟ್ಟ ಒಡವೆಗಳನ್ನು ನೋಡಿ ಗಂಡ ಕೆರಳಿದ್ದ. "ಹುಚ್ಚಾ ನಿಂಗೆ?" ಕೇಳಿದ್ದ.

"ಇದರಲ್ಲಿ ನೀವು ಕೊಟ್ಟಿದ್ದು ಏನೂ ಇಲ್ಲ. ಎಲ್ಲಾ ಅಪ್ಪ ಕೊಟ್ಟಿದ್ದು, ಅಮ್ಮನ ಸ್ವಂತದ್ದು..."

"ನಿಶ್ಶೈಸಿಬಿಟ್ಟಿದ್ದಿ ನೀನು..."

"ಹೌದ್ರೀ. ನಂಗೆ ಎಲ್ಲಕ್ಕಿಂತಾ ಅಪ್ಪನ ಪ್ರಾಣ ಮುಖ್ಯ..."

ಒಡವೆಗಳನ್ನು ತೆಗೆದಿಟ್ಟುಕೊಂಡ ಗಂಡ ಅವನ್ನು ಮಾರಿದನೋ, ಬಿಟ್ಟನೋ ಸರೋಜನಿಗೆ ಗೊತ್ತಿಲ್ಲ. ದುರ್ದೈವ. ಆಪರೇಷನ್ ಆದರೂ ಬದುಕುಳಿಯಲಿಲ್ಲ ಅಪ್ಪ.

★★★

ಗಂಡ, ಹೆಂಡಿರಲ್ಲಿ ಕಿಡಿ ಹತ್ತಿಕೊಳ್ಳಲು ಇದೊಂದು ನೆಪವಾಯ್ತು. 'ಹೇಳಿದ್ರೆ ಕೇಳ್ಲಿಲ್ಲ...' ಎಂದು ಗಂಡ. 'ಹೀಗಾಗುತ್ತೆ ಅಂತ ಭವಿಷ್ಯ ಗೊತ್ತಿರುತ್ತಾ? ನಮ್ಮ ಕರ್ತವ್ಯ ನಾವು ಮಾಡಿದ್ವಿ ಅನ್ನೋ ಸಮಾಧಾನವಾದ್ರೂ ಇರುತ್ತೆ' ಎಂದು ಸರೋಜ. ಈ ವಿರಸಕ್ಕೆ ಮತ್ತೊಂದು ಕಾರಣ ಕೊಂಡಿ ಜೋಡಿಸಿಕೊಂಡಿತು. 'ಜಮೀನು ಮಾರಿ ನಿಮ್ಮಮ್ಮ ಇಲ್ಲೇ ಬಂದಿರ್ಲಿ. ಅಲ್ಲಿ ಮತ್ಯಾರಿದಾರೆ?' ಅಂದ ಗಂಡ. ಅಮ್ಮನಿಗೆ ಈ ಅಳಿಯನನ್ನು ಕಂಡರೆ ವಿಪರೀತದ ಭಯ. ಅವನ ನೆರಳಿನಲ್ಲಿರಲು ಸುತರಾಂ ಇಷ್ಟವಿಲ್ಲ. 'ಕಷ್ಟವೋ, ಸುಖವೋ, ಇದ್ದೂರಲ್ಲಿ ದಿನ ಕಳೆಯುತ್ತೇನೆ' ಎನ್ನುವ ಮಾತು ಸರೋಜನಿಗೂ ಒಪ್ಪಿಗೆ. ಮನೆಪಾಠ ನಡೆಯುವ ಹೊತ್ತಿನಲ್ಲಿ ಮಗಳು ದನಿ ತೆಗೆದು ಅತ್ತರೂ ಕಣ್ಣು ಕೆಂಪಾಗಿಸಿಕೊಳ್ಳುತ್ತಿದ್ದ ಗಂಡನ ದರ್ಬಾರಿನಲ್ಲಿ ಟೀವಿ ಹಾಕಿಕೊಂಡು ನೋಡುತ್ತಾ ಸಮಯ ಕಳೆಯುವುದಕ್ಕೂ ಅಮ್ಮ ಅಸಹಾಯಕಳು ಎಂದು ಗೊತ್ತಿದ್ದ ಸರೋಜ ಗಂಡನ ಮಾತಿಗೆ ಸೊಪ್ಪು ಹಾಕಲಿಲ್ಲ. ಕರಿಗಟ್ಟಿದ ಹಂಚಿನಮಾಡಿನ ತನ್ನ ಹಳ್ಳಿ ಮನೆ, ಎದುರಿನ ವಿಶಾಲ ಅಂಗಳ, ಸುತ್ತ ಬೆಳೆದಿದ್ದ ಥರಾವರಿ ಹೂಗಿಡಗಳು, ಹಪ್ಪಳದ ಹಲಸಿನಮರಗಳು, ಮಿಡಿಉಪ್ಪಿನಕಾಯಿಯ ಮರಗಳು, ತೂಗಿ ತೊನೆಯುವ ಕಂಗು, ಅಡಿಕೆ ಸುಲಿಯುವಾಗ ಹೊರಹೊಮ್ಮುವ ಅಡಿಕೆರಸದ ಘಮಲು, ನಾಲಿಗೆ ಸುಂಯ್ಗುಟ್ಟಿಸುವ ಜೀರಿಗೆಮೆಣಸಿನ ಖಾರ ಬೆರೆಸಿದ ಹಲಸಿನ ಹಪ್ಪಳದ ಹಿಟ್ಟು, ಬಿಸಿಲ ವಾಸನೆಯೊಡನೆ ಅರೆಒಣಗಿದ ಇಂಗಿನ ಘಮ ಬೆರೆತ ಸಂಡಿಗೆ, ನಾನಾ ಬಗೆಯ ಚಿಗುರು ಚೂಟಿ ತಂದು ಮಾಡುವ ತಂಬುಳಿ, ಬೆಳಗಾಗುವುದಕ್ಕೆ ಮುನ್ನವೇ ಸನಿಹದ ಕಾನಿನಿಂದ ಕೇಳಿ ಬರುತ್ತಿದ್ದ ಕಾಜಾಣದ ದೀರ್ಘಾಲಾಪನೆ, ನಾನಾ ಜಾತಿಯ ಹಕ್ಕಿಗಳ ಸುಸ್ವನ, ಗುಡ್ಡದ ಮೇಲಿನಿಂದ ಕೇಳುವ ನವಿಲುಗಳ ಕಾಕು, ನಡುರಾತ್ರಿಯ ನಿದ್ದೆಯ ನಡುವೆಯೂ ಕಿವಿದೆರೆಗೆ ತಲುಪುತ್ತಿದ್ದ ನರಿಗಳ ಊಳು, ಮಳೆಗಾಲದಲ್ಲಿ ಟಪ್... ಟಪ್... ಟಪ್... ಎಂದು ಹಂಚಿನ ಮೇಲೆ ಉದುರಿ ಬೀಳುತ್ತಾ ನಂತರ ಜೋರುಜೋರಾಗುವ ಮಳೆಯ ಸಂಗೀತ, ಮೊದಲ ಮಳೆಗೆ ಘಮಗುಟ್ಟುವ ಮಣ್ಣಿನ ಪರಿಮಳ, ನೂರು ನೂರು ಸುಖದ ಕನವರಿಕೆಗಳು. ಒಮ್ಮೆ ಕಳೆದುಕೊಂಡರೆ ಜನ್ಮೇಪಿ ಮತ್ತೆ ಸಿಗದ ಮುದ ಕೊಡುವ ಅನುಭವಗಳು. ಇಲ್ಲ, ಇಲ್ಲ, ಇಲ್ಲ. ಜಮೀನು ಮಾರಿ ಪೇಟೆ ಸೇರಲು ಒಂದೊಮ್ಮೆ ಅಮ್ಮ ಒಪ್ಪಿದರೂ ತಾನು ಒಪ್ಪಲಾರೆ. ಈ ಹಳ್ಳಿಮನೆಯಲ್ಲಿ ಕಳೆದ ಬಾಲ್ಯ, ಯೌವನದ ದಿನಗಳು ತನ್ನ ಸ್ಮೃತಿಯಲ್ಲಿ ಅವಿಸ್ಮರಣೀಯ ನೆನಪುಗಳಾಗಿ ದಾಖಲಾಗಿವೆ ಮತ್ತು ನೆನಪುಗಳು ನೆನಪುಗಳಾಗಿ ಉಳಿಯುವಂತಾಗದೆ ನೆನೆಸಿಕೊಂಡಾಗಲೊಮ್ಮೆ ಅವು ತನಗೆ ದಕ್ಕಬೇಕು. ಹಾಗಾಗಬೇಕಾದರೆ ಈ ಹಳ್ಳಿಮನೆ ಶಾಶ್ವತವಾಗಿ ತಮ್ಮ ಪಾಲಿಗೆ ಉಳಿದುಕೊಳ್ಳಬೇಕು, ಕೊನೇಪಕ್ಷ ಅಮ್ಮ ಇರುವಷ್ಟು ದಿನವಾದರೂ. ಅಥವಾ ಸಾಧ್ಯವಾದರೆ ಆಮೇಲೂ ಮುಸುಕಿನೊಳಗಿನ ಗುದ್ದಿನಂತೆ ಗಂಡನೊಡನೆ ಆರಂಭವಾದ ಕಲಹ ಸಶೇಷವಾಗಿ ಮುಂದುವರಿಯುತ್ತಲೇ ಹೋಯ್ತು. ಮಗಳನ್ನು ಬಗಲಲ್ಲಿ ಚಚ್ಚಿಕೊಂಡು ತೌರಿಗೆ ಬಂದಿಳಿಯುವ ಸಂದರ್ಭ ಜಾಸ್ತಿಯಾಗುತ್ತಾ ಬಂತು.